**ಓಂ ಶಾಂತಿ, ಬಾಪ್ ದಾದಾ,  ಅವ್ಯಕ್ತ ಮುರಳಿ 17-07-1969.**

(ओम शान्ति,  बापदादा. अव्यक्त मुरली 17-07-1969)

***ಅವ್ಯಕ್ತ ಸ್ಥಿತಿ ರೂಪಿಸಿಕೊಳ್ಳುವ ಯುಕ್ತಿಗಳು*** (अव्यक्त स्थिति बनाने की युक्तियाँ)

ಅವ್ಯಕ್ತ ಸ್ಥಿತಿ ಒಳ್ಳೆಯದೆನಿಸುತ್ತದೆಯೋ ಅಥವಾ ವ್ಯಕ್ತದಲ್ಲಿ ಬರುವುದೋ? ಅವ್ಯಕ್ತ ಸ್ಥಿತಿಯಲ್ಲಿ ಶಬ್ದವಿದೆಯೇ? ಶಬ್ದದಿಂದ ದೂರವಿರಲು ಬಯಸುತ್ತೀರಾ? ತಾವೆಲ್ಲರೂ ಯಾವಾಗ ಶಬ್ದದಿಂದ ದೂರವಿರಲು ಪ್ರಯತ್ನಿಸುತ್ತೀರೋ, ಒಳ್ಳೆಯದೂ ಅನಿಸುತ್ತದೆ ಆದರೂ ಬಾಪ್ ದಾದಾರವರನ್ನು ವ್ಯಕ್ತದಲ್ಲಿ ಏಕೆ ಕರೆಯುತ್ತೀರಿ? ಎಲ್ಲ ಸಮಯವೂ ಅವ್ಯಕ್ತ ಸ್ಥಿತಿಯಲ್ಲಿರಲು ಯಾವ ಪುರುಷಾರ್ಥ ಮಾಡಬೇಕು? ಅವ್ಯಕ್ತ ಸ್ಥಿತಿಯಲ್ಲಿ ಇರಬಹುದಾದಂತಹ ಒಂದಕ್ಷರವನ್ನು ಹೇಳಿ. ಅವ್ಯಕ್ತ ಸ್ಥಿತಿಯಿರಲು ಯಾವ ಒಂದು ಅಕ್ಷರವನ್ನು ನೆನಪಿಟ್ಟುಕೊಳ್ಳುವಿರಿ? ಮನ-ವಚನ- ಕರ್ಮ ಈ ಮೂರೂ ವ್ಯಕ್ತದಲ್ಲಿದ್ದರೂ ಅವ್ಯಕ್ತರಾಗಿರಲು ಯಾವ ಅಕ್ಷರ ಹೇಳಿ? ಆತ್ಮ ಅಭಿಮಾನಿಗಳಾಗುವುದು ಎಂದರೆ ಅವ್ಯಕ್ತ ಸ್ಥಿತಿ, ಆ ಸ್ಥಿತಿಗೆ ಏನನ್ನು ನೆನಪಿಟ್ಟುಕೊಳ್ಳಬೇಕು? ಪುರುಷಾರ್ಥವೇನು ಮಾಡಬೇಕು? ಈ ರೀತಿಯ ಸ್ಥಿತಿ ನಿಧಾನವಾಗಿ ಎಲ್ಲರದೂ ಆಗುವುದು. ಯಾರ ಆಂತರ್ಯದಲ್ಲಿ ಯಾವ ಮಾತಿದೆಯೋ ಅವರು ಹೇಳಿದರೂ ಹೇಳದೆ ಇದ್ದರೂ ಅದು ಮೊದಲೇ ತಮಗೆ ತಿಳಿಯುವುದು. ಇಂತಹ ಸಮಯ ಬರಲಿದೆ. ಆದ್ದರಿಂದ ಅಭ್ಯಾಸ ಮಾಡಿಸುತ್ತಿದ್ದೇವೆ.

ಯಾವ ಒಂದು ಅಕ್ಷರವನ್ನು ನೆನಪಿಟ್ಟುಕೊಳ್ಳುವುದು ಎಂದು ಕೇಳುತ್ತಿದ್ದೆವು? ತಮ್ಮನ್ನು ಅತಿಥಿಯೆಂದು ತಿಳಿಯುವುದು, ಅತಿಥಿಯೆಂದು ತಿಳಿದರೆ ಅಂತಿಮ ಸಂಪೂರ್ಣ ಸ್ಥಿತಿಯ ವರ್ಣನೆ ಏನಿದೆಯೋ ಅದಾಗುವುದು. ತಮ್ಮನ್ನು ಅತಿಥಿಯೆಂದು ತಿಳಿದಾಗ ವ್ಯಕ್ತದಲ್ಲಿರುತ್ತಿದ್ದರೂ ಅವ್ಯಕ್ತರಾಗಿರುತ್ತೀರಿ, ಅತಿಥಿಯ ಸೆಳೆತ ಯಾರೊಂದಿಗೂ ಇರುವುದಿಲ್ಲ. ನಾವು ಶರೀರದಲ್ಲಿಯೂ, ಹಳೆಯ ಜಗತ್ತಿನಲ್ಲಿಯೂ ಅತಿಥಿಗಳಾಗಿದ್ದೇವೆ. ಶರೀರದಲ್ಲಿಯೇ ಅತಿಥಿಗಳು ಎಂದಾಗ ಶರೀರದೊಂದಿಗೆ ಸೆಳೆತವೇಕೆ? ಕೇವಲ ಸ್ವಲ್ಪ ಸಮಯಕ್ಕಾಗಿ ಈ ಶರೀರವನ್ನು ಕೆಲಸಕ್ಕೆ ತೆಗೆದುಕೊಳ್ಳುವುದು.

ಇಲ್ಲಿ ಅತಿಥಿಗಳಾದರೆ ಅಲ್ಲಿ ಏನಾಗುವಿರಿ? ಇಲ್ಲಿ ಎಷ್ಟು ಅತಿಥಿಯೆಂದು ತಿಳಿದುಕೊಳ್ಳುವಿರೋ ಅಷ್ಟೇ ಅಲ್ಲಿ ವಿಶ್ವದ ಮಾಲಿಕರಾಗುವಿರಿ, ಈ ಜಗತ್ತಿಗೆ ಮಾಲಿಕರಲ್ಲ, ಹೊಸ ಜಗತ್ತಿಗೆ ಮಾಲೀಕರು. ಈ ವ್ಯಕ್ತ ಭಾವದಲ್ಲಿ ಬರಲು ಕಾರಣ ತಮ್ಮನ್ನು ತಾವು ಅತಿಥಿಯೆಂದು ತಿಳಿದುಕೊಳ್ಳುವುದಿಲ್ಲ. ವಸ್ತುಗಳ ಮೇಲೆಯೂ ತಮ್ಮ ಅಧಿಕಾರವಿದೆಯೆಂದು ತಿಳಿಯುತ್ತೀರಿ, ಆದ್ದರಿಂದ ಅದರ ಬಗೆಗೆ ಮಮತ್ವ ಬರುತ್ತದೆ. ತಮ್ಮನ್ನು ತಾವು ಅತಿಥಿಯೆಂದು ತಿಳಿದರೆ ಈ ಎಲ್ಲ ಮಾತುಗಳು ಸಮಾಪ್ತಿಯಾಗುತ್ತವೆ.

ತಮ್ಮ ಬ್ಯಾಂಕ್ ನ ಉಳಿತಾಯ ಖಾತೆಯನ್ನು ನೋಡಿಕೊಳ್ಳಬೇಕು. ಎಷ್ಟು ಸಂಪಾದನೆ ಮಾಡುತ್ತೀರೋ ಅಷ್ಟನ್ನು ಉಪಯೋಗಿಸುವಿರೋ ಅಥವಾ ಸ್ವಲ್ಪ ಜಮಾ ಕೂಡ ಮಾಡುತ್ತೀರೋ? ಒಟ್ಟು ಎಷ್ಟು ಜಮಾ ಮಾಡಿದ್ದೀರೆಂದು ನೋಡಿದ್ದೀರಾ? ಆ ಜಮಾ ಮಾಡಿದ ಲೆಕ್ಕದಂತೆ ತಮ್ಮಿಂದ ತಾವೇ ಸಂತುಷ್ಟರಾಗಿದ್ದೀರಾ? (ಇಲ್ಲ) ಹಾಗಾದರೆ ಜಮಾ ಮಾಡಿಕೊಳ್ಳುವ ಸಮಯ ಬೇರೆಯಿದೆಯಾ? ಎಷ್ಟು ಸಮಯವಿದೆ? ಸಮಯವೂ ಇಲ್ಲ, ಸಂತುಷ್ಟವಾಗಿಯೂ ಇಲ್ಲವಾದರೆ ಏನಾಗುವುದು? ಈಗ ಎಲ್ಲರಿಗೂ ಇದರ ಬಗೆಗೆ ಹೆಚ್ಚು  ಗಮನ ಕೊಡಬೇಕಾಗಿದೆ. ತಮ್ಮ ಜಮಾ ಖಾತೆಯನ್ನು ಹೆಚ್ಚಿಸಿಕೊಳ್ಳಬೇಕು. ಅತೀ ಕಡಿಮೆಯೆಂದರೆ ತಮ್ಮಿಂದ ತಾವೇ ಸಂತುಷ್ಟರಾಗಿರಬೇಕು. ತಮ್ಮ ಸಂಪಾದನೆಯಿಂದ ತಾವೇ ಸಂತುಷ್ಟರಾಗಿಲ್ಲದಿದ್ದರೆ ಬೇರೆಯವರಿಗೆ ಏನು

ಕೊಡುವಿರಿ? ಪ್ರತಿಯೊಬ್ಬರೂ ಎಷ್ಟು ಜಮಾ ಮಾಡಿಕೊಳ್ಳಬೇಕು. ಕೇವಲ ತಮಗೋಸ್ಕರ ಜಮಾ ಮಾಡಿಕೊಳ್ಳಬೇಕೋ ಅಥವಾ ಬೇರೆಯವರಿಗಾಗಿಯೂ ಜಮಾ ಮಾಡಿಕೊಳ್ಳಬೇಕೋ? ಬೇರೆಯವರಿಗೆ ದಾನ ಮಾಡಲು ಜಮಾ ಮಾಡಿಕೊಳ್ಳುವುದಿಲ್ಲವೇ? ಎಲ್ಲರೂ ಭಿಕಾರಿಯ ರೂಪದಲ್ಲಿ ತಮ್ಮಿಂದ ಭಿಕ್ಷೆಯನ್ನು ಬೇಡಲು ಬರುವಂತಹ ಸಮಯ ಇನ್ನು ಬರಲಿದೆ. ಅವರಿಗೆ ಕೊಡುವುದಿಲ್ಲವೇ? ಇಷ್ಟಂತೂ ಜಮಾ ಮಾಡಿಕೊಳ್ಳಬೇಕಲ್ಲವೇ? ತಮಗಾಗಿ ಮಾಡಿಕೊಳ್ಳಲೇಬೇಕು ಆದರೆ ಜೊತೆ ಜೊತೆಗೆ ಇಂತಹ ದೃಶ್ಯ ಎಲ್ಲರ ಮುಂದೆ ಬರುವುದು, ಯಾರೆಲ್ಲ ಇಂದು ಭರಪೂರ ಆಗಿದ್ದೇವೆಂದು ತಿಳಿದಿದ್ದಾರೋ ಅವರೂ ಭಿಕಾರಿಯ ರೂಪದಲ್ಲಿ ತಮ್ಮೆಲ್ಲರಿಂದ ಭಿಕ್ಷೆ ಬೇಡುವರು. ಜಮಾ ಆದಾಗ ಭಿಕ್ಷೆ ಕೊಡಬಲ್ಲಿರಿ ತಾನೆ? ದಾತಾನ ಮಕ್ಕಳು ಕೊಡುವವರೇ ಆಗಿರುವಿರಿ. ತಮ್ಮೆಲ್ಲರ ಒಂದು ಕ್ಷಣದ ದೃಷ್ಟಿಯ, ಅಮೂಲ್ಯ ವಚನಗಳ ಆಕಾಂಕ್ಷಿಗಳಾಗಿರುವರು. ಇಂತಹ ಅಂತಿಮ ದೃಶ್ಯವನ್ನು ಎದುರಿಗೆ ಇಟ್ಟುಕೊಂಡು ಪುರುಷಾರ್ಥವನ್ನು ಮಾಡಿ, ಎದುರಿಗೆ ಬಂದ ಹಸಿದ ಆತ್ಮ ಖಾಲಿ ಕೈಯಿಂದ ಹೋಗುವಂತಾಗಬಾರದು. ಸಾಕಾರದಲ್ಲಿ ಏನನ್ನು ಮಾಡಿ ತೋರಿಸಿದರು? ಯಾವುದೇ ಆತ್ಮ, ಹೇಗೆ ಇರಲಿ ಅಸಂತುಷ್ಟರಾಗಿ ಹೋಗಬಾರದು ಎಂಬ ಮಾತುಗಳನ್ನು ಯೋಚಿಸಬೇಕು ಕೇವಲ ತಮ್ಮ ಬಗ್ಗೆ ಅಲ್ಲ.

ಈಗ ತಾವು ರಚಯಿತರಾಗಿದ್ದೀರಿ. ತಮ್ಮ ಒಬ್ಬ ರಚಯಿತನ ಹಿಂದೆ ರಚನೆಯೂ ಇದೆ. ಮಕ್ಕಳು ಎಲ್ಲಿಯವರೆಗೂ ಇರುವುದಿಲ್ಲವೋ ಅಲ್ಲಿಯವರೆಗೂ ತಂದೆ-ತಾಯಿಯ ಸಂಪಾದನೆ ಕೇವಲ ತಮಗೋಸ್ಕರವೇ ಇರುತ್ತದೆ. ಮಕ್ಕಳಾದಾಗ ಅವರ ಕಡೆಗೂ ಗಮನ ಕೊಡಬೇಕಾಗುತ್ತದೆ. ಇಲ್ಲಿಯವರೆಗೆ ಏನು ಸಂಪಾದನೆ ಮಾಡಿದಿರೋ ಅದನ್ನು ಬಹಳ ಸಮಯ ಉಪಭೋಗಿಸಿರುವಿರಿ ಆದರೆ ಈಗ ತಮ್ಮ ರಚನೆಯ ಕಡೆಗೂ ಗಮನ ಕೊಡಿ. ತಾವೆಲ್ಲರೂ ತಮ್ಮ ರಚನೆಯನ್ನು ನೋಡಿರುವಿರಾ? ದೊಡ್ಡದಿದೆಯೋ, ಚಿಕ್ಕದಿದೆಯೋ, ಎಷ್ಟಿದೆ? ಬಾಪ್ ದಾದಾ ಪ್ರತಿಯೊಬ್ಬರ ಫಲಿತಾಂಶವನ್ನು ನೋಡುತ್ತಾರೆ. ಆ ಲೆಕ್ಕದಂತೆ ಹೇಳುತ್ತಾರೆ. ಒಂದೊಂದು ನಕ್ಷತ್ರದ ರಚನೆ ಎಷ್ಟಿದೆ? ಎಷ್ಟು ಇಲ್ಲಿ ರಚನೆಯಿದೆಯೋ ಅಷ್ಟು ಅಲ್ಲಿ ದೊಡ್ಡ ರಾಜ್ಯವಿರುವುದು. ಇಲ್ಲಿ ಎಷ್ಟು ರಚನೆ ಮಾಡಿರುವಿರಿ? ತಮ್ಮ ರಚನೆಯನ್ನು ನೋಡಿದ್ದೀರಾ? ಭವಿಷ್ಯವನ್ನು ತಿಳಿದಿದ್ದೀರಾ? ಎಲ್ಲರೂ ರಚಯಿತರಾಗಿದ್ದೀರಿ ಆದರೆ ರಚನೆ ದೊಡ್ಡದೋ ಚಿಕ್ಕದೋ? (ದೊಡ್ಡ ರಚನೆಯ ಆಶೆಯಿದೆ) ರಚನೆ ದೊಡ್ಡದಾದರೆ ಅದರ ಜೊತೆಗೆ ಜವಾಬ್ದಾರಿಗಳೂ ಹೆಚ್ಚು. ಒಳ್ಳೆಯದು.

ಅವ್ಯಕ್ತ ಮುರಳಿ17-07-1969.

***ಅವ್ಯಕ್ತ ಸ್ಥಿತಿಯನ್ನು ರೂಪಿಸಿ ಕೊಳ್ಳುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ /ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

ನಾನು ಈಶ್ವರೀಯ ಸೇವೆಗಾಗಿ ಈ ಭೂಮಿಯ ಮೇಲೆ ಅವತರಿಸಿರುವ ಅವ್ಯಕ್ತ ಫರಿಶ್ತಾ.

1.ನಾನು ಸದಾ ಮನ, ವಚನ,  ಕರ್ಮದಿಂದ ಅವ್ಯಕ್ತ ಸ್ಥಿತಿಯಲ್ಲಿ ಇರುವ ಆತ್ಮಾಭಿಮಾನಿ.

2. ನಾನು ಸದಾ ಈ ಶರೀರಕ್ಕೆ ಮತ್ತು ಹಳೆಯ ಪ್ರಪಂಚಕ್ಕೆ ಅತಿಥಿಯೆಂದು ಭಾವಿಸುವ ವಿಶ್ವದ ಯಜಮಾನಿ.

3. ನನ್ನ ಸಂಪಾದನೆಯು ಇತರರಿಗೆ ಸಂತುಷ್ಟತೆ ಮತ್ತು ಸರ್ವ ಖಜಾನೆಗಳನ್ನು ಹಂಚುವಷ್ಟು ಸಂಪನ್ನವಾಗಿದೆ.

4. ನಾನು ಬ್ರಹ್ಮಾ ತಂದೆಯ ಸಮಾನವಾಗಿ.. ನನ್ನ ಹತ್ತಿರ ಯಾರು ಬಂದಾಗಲೂ ಸಂತುಷ್ಟವಾಗಿ ಹೋಗುವಷ್ಟು ಸಂಪೂರ್ಣ ಸಂಪನ್ನ ಸ್ವರೂಪ.

5. ನಾನು ಅಂತಿಮ ದೃಶ್ಯವನ್ನು ಎದುರಿಗೆ ಇಟ್ಟುಕೊಂಡು ಪುರುಷಾರ್ಥವನ್ನು ಮಾಡುತ್ತಿದ್ದೇನೆ.

6. ನಾನು ನನ್ನ ರಚನೆಯ ಪ್ರತಿ ಜವಾಬ್ದಾರಿಯನ್ನು ತೆಗೆದುಕೊಳ್ಳುವ ರಚಯಿತನು.